# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 10/2024

ಡಬ್ಲ್ಯೂ ಡಬ್ಲ್ಯೂ-1

**<u>ದಿನಾಂಕ 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು 2 ನೇ ಪಿ.ಯು.ಸಿ.ವರೆಗೆ ಓದಿದ್ದೇನೆ. 2 ನೇ ಪಕ್ಷಗಾರ ಸಂಸ್ಥೆಯನ್ನು ಏಪ್ರಿಲ್-2017 ರಲ್ಲಿ ಕೆಲಸಕ್ಕೆ ಸೇರಿಕೊಂಡು, ದಿನಾಂಕ 02.10.2022 ರವರೆಗೆ ಕೆಲಸ ಮಾಡಿರುತ್ತೇನೆ. ನಾನು 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಕೆಲಸ ಮಾಡುವ ಮುಂಚೆ ನಾನು ವಿನ್ಯಾಸ್ ಇನೋವೇಟಿವ್ ಹಾಗೂ ರಾಣೆ ಮದ್ರಾಸ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೆ. ವಿನ್ಯಾಸ್ ಹಾಗೂ ರಾಣೆ ಮದ್ರಾಸ್ ಸಂಸ್ಥೆಗಳಲ್ಲಿ ನಾನು ಗುತ್ತಿಗೆ ಕಾರ್ಮಿಕನಾಗಿ ಕೆಲಸ ಮಾಡಿರುತ್ತೇನೆ. ಸದರಿ ಎರಡೂ ಸಂಸ್ಥೆಗಳು ಕಾರ್ಖಾನೆ ಕಾಯ್ದೆ ಅಡಿಯಲ್ಲಿ ನೋಂದಣಿಗೊಂಡಿದ್ದವು. ಕಾರ್ಖಾನೆಗಳು ಹೇಗೆ ಕೆಲಸ ಮಾಡುತ್ತವೆ ಎಂಬ ಬಗ್ಗೆ ನನಗೆ ಪೂರ್ಣ ಅರಿವು ಇರುತ್ತದೆ ಎಂದರೆ ಸರಿ.

ನಾನು ಮೈಸೂರು ಜಿಲ್ಲಾ ಕಾರ್ಮಿಕ ಸಂಘದಲ್ಲಿ ಸದಸ್ಯನಾಗಿದ್ದೆ. ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕಾರ್ಮಿಕ ಸಂಘ ಇರಲಿಲ್ಲ ಎಂದರೆ ಸರಿ. ದಿನಾಂಕ 02.10.2022 ರ ವೇಳೆಗೆ ಕಂಪನಿ ವತಿಯಿಂದ 40 ಜನ ಕಾರ್ಮಿಕರು ಹಾಗೂ ಗುತ್ತಿಗೆ ಆಧಾರದಲ್ಲಿ 70 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ನ್ಯಾಯಾಲಯದಲ್ಲಿ ನನ್ನನ್ನು ಹೊರತು ಪಡಿಸಿ ಇನ್ನೂ 14 ಜನ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಮತ್ತು ಶ್ರೀಧರ ಎನ್ನುವವರು ಉಳಿದ 14 ಜನರ ಪರವಾಗಿ ಸಾಕ್ಷಿಯನ್ನು ಕೊಡುತ್ತಿದ್ದೇವೆ ಎಂದರೆ ಸರಿ. ನನಗೆ ಉಳಿದ 14 ಕಾರ್ಮಿಕರು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಸದರಿ ಅಧಿಕಾರ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೀರಾ ಎಂದರೆ ಎಲ್ಲರ ಸಹಿ ಮಾಡಿಸಿ ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ ಎನ್ನುತ್ತಾರೆ. ನಾನು ಸದರಿ

ಅಧಿಕಾರ ಪತ್ರವನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ 15 ಜನ ಕಾರ್ಮಿಕರು ಕಾರ್ಮಿಕ ಸಂಘದ ಸದಸ್ಯರು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ. ನಾವು 15 ಜನ ಕಾರ್ಮಿಕರು ಯಾವುದೇ ಸಂಘದ ಸದಸ್ಯರಾಗಿಲ್ಲದೇ ಇರುವ ಕಾರಣ ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 02.10.2022 ರಂದು ಏಕೆ ಕೆಲಸ ನಿರಾಕರಿಸಿರುತ್ತಾರೆ ಎಂದರೆ ಸಾಕ್ಷಿ, ಎರಡು ದಿನ ಕೆಲಸ ಇಲ್ಲ ಎಂದು ರಜೆ ಕೊಟ್ಟಿದ್ದರು, ನಂತರ 15 ದಿನ ಬೇರೆ ಕಡೆಗೆ ಸಂಸ್ಥೆಯನ್ನು ಸ್ಥಳಾಂತರಿಸುತ್ತೇವೆ ಎಂದು ಹೇಳಿದರು, ನಂತರ ನಮಗೆ ಕೆಲಸ ಇಲ್ಲ ಎಂದು ಹೇಳಿರುತ್ತಾರೆ. ನಂತರ 2022 ರ ಅಕ್ಟೋಬರ್ 3 ನೇವಾರದಲ್ಲಿ ನಮಗೆ ಕೆಲಸ ಇಲ್ಲ ಎಂದು ಹೇಳಿದ್ದರು.

2 ನೇ ಪಕ್ಷಗಾರರು ಮೈಸೂರಿನಲ್ಲಿ ಕೆಲಸ ಇಲ್ಲ, ಬೆಂಗಳೂರಿನಲ್ಲಿ ಬಂದು ಕೆಲಸಕ್ಕೆ ಸೇರಿಕೊಳ್ಳಿ ಎಂದು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ದಿನಾಂಕ 02.10.2022 ರ ಸಮಯದಲ್ಲಿ ತುಂಬಾ ಜೋರಾಗಿ ಮಳೆ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಮಳೆ ನೀರು ಕಾರ್ಖಾನೆ ಒಳಗೆ ಹರಿದು ಪೇಪರ್ ಗಳು, ಫೈಲ್ ಗಳು ಒದ್ದೆಯಾಗಿ, ಅಲ್ಲಿ ಕೆಲಸ ಮಾಡದೇ ಇರುವ ಪರಿಸ್ಥಿತಿ ಉಂಟಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಕೆಲವು ಭಾವಚಿತ್ರಗಳನ್ನು ತೋರಿಸಿ ಅವು ತುಂಬಾ ಮಳೆ ಬಂದು ಕಾರ್ಖಾನೆ ಒಳಗೆ ಮಳೆ ನೀರು ಹರಿದು ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಪರಿಸ್ಥಿತಿ ಉಂಟಾಗಿದ್ದ ಸ್ಥಿತಿಗೆ ಸಂಬಂಧಪಟ್ಟಿದ್ದವುಗಳು ಎಂದರೆ ಸರಿಯಲ್ಲ. 2 ನೇ ಪಕ್ಷಗಾರ ಸಂಸ್ಥೆಯವರು ಈಗಲೂ ಸಹ ಬೆಂಗಳೂರಿನಲ್ಲಿ ಬಂದು ಕೆಲಸ ಮಾಡಿ ಎಂದು ನನಗೆ ಕರೆದಿದ್ದರೂ ಸಹ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಉಳಿದ 14 ಜನರ ವಿದ್ಯಾಭ್ಯಾಸ ನನಗೆ ಗೊತ್ತಿಲ್ಲ, ಆದರೆ ಸಂಬಳ ಎಲ್ಲರಿಗೂ ಒಂದೇ ರೀತಿಯಾಗಿತ್ತು. ಅವರೆಲ್ಲ ಏಪ್ರಿಲ್-2017 ರಲ್ಲಿ 15 ದಿವಸ ಹೆಚ್ಚು ಕಡಿಮೆ ಕೆಲಸಕ್ಕೆ ಸೇರಿಕೊಂಡಿದ್ದರು. ನಿಖರವಾಗಿ ನನಗೆ ಗೊತ್ತಿಲ್ಲ. ನಮಗೆ ನಿವ್ವಳ ಸಂಬಳ ರೂ.15,000/- ಕೊಡುತ್ತಿದ್ದರು, ಇ.ಎಸ್.ಐ. ಪಿ.ಎಫ. ಮುರಿದು ಕೊಂಡು

ರೂ.10,000/- ಕೊಡುತ್ತಿದ್ದರು. ನಾನು ನ್ಯಾಯಾಲಯದ ಮುಂದೆ ನನ್ನ ವೇತನದ ಚೀಟಿಗಳನ್ನು ಹಾಜರು ಮಾಡಿರುತ್ತೇನೆ.

ನಾನು ಹಾಜರು ಮಾಡಿದ ವೇತನ ಚೀಟಿಗಳು 2018ರ ಜೂನ್, ಅಕ್ಟೋಬರ್, ಸೆಪ್ಟೆಂಬರ್, ನವೆಂಬರ ತಿಂಗಳ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ನಾನು ಯಾವ ಕಾರ್ಮಿಕರ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇನೆ ಅವರು ನ್ಯಾಯಾಲಯದ ಮುಂದೆ ಸಾಕ್ಷಿ ನೀಡಲು ನನ್ನದೇನೂ ಅಭ್ಯಂತರ ಇರುವುದಿಲ್ಲ. ನಾನು ಹಾಜರು ಮಾಡಿರುವ ಇ.ಎಸ್.ಐ. ದಾಖಲೆಗಳು ಕಾನೂನು ಬದ್ಧವಾದ ದಾಖಲೆಗಳು ಎಂದರೆ ಸರಿ. ನಾನು ಹಾಜರು ಮಾಡಿರುವ ದಾಖಲೆಗಳು ಹಾಗೂ ಅದರಲ್ಲಿ ಒದಗಿಸಿರುವ ಮಾಹಿತಿಗಳು ಕಾನೂನು ಬದ್ಧವಾಗಿದ್ದು, ಸುಳ್ಳು ಹೇಳಲು ಅವಕಾಶ ಇರುವುದಿಲ್ಲ ಎಂದರೆ ಸರಿ. ನಾನು ಹಾಜರು ಮಾಡಿರುವ ಗುರುತಿನ ಚೀಟಿಯ ದಾಖಲೆಗಳು ಮಬ್ಬಾಗಿರುತ್ತವೆ, ಅದರ ಮೂಲ ದಾಖಲೆಗಳನ್ನು ನಾನು ಮುಂದಿನ ದಿನಾಂಕದಲ್ಲಿ ಹಾಜರುಪಡಿಸಬಲ್ಲೆ. 15 ಜನರನ್ನು ಹೊರತುಪಡಿಸಿ ಉಳಿದವರು ಯಾರು ಪ್ರಕರಣ ಮಾಡಿರುವುದಿಲ್ಲ ಎಂದರೆ ಸರಿ.

ಸದರಿ 14 ಜನರ ಕಾರ್ಮಿಕರು ಹೆಸರುಗಳನ್ನು ನಾನು ಹೇಳಬಲ್ಲೆ. ಅವರ ಹೆಸರುಗಳೆಂದರೆ ನಾಗೇಂದ್ರ, ಪ್ರಸನ್ನ, ಮಂಜು ಬಿ., ಮಂಜುನಾಥ ಎಸ್., ಮತ್ತೊಬ್ಬ ಮಂಜುನಾಥ ಎಸ್., ರಾಜೇಶ, ಹರೀಷ, ನಾಗರಾಜು, ಸಿದ್ದರಾಜು, ಗೌತಮ, ಕೃಷ್ಣ, ಸಾಗರ್. ಇವರೆಲ್ಲರ ವೇತನ ಚೀಟಿಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ಇರುವವರದು ನಾವು ಕೊಟ್ಟಿರುತ್ತೇವೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.) (ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**

## ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**: 10/2024

ಡಬ್ಲ್ಯೂ ಡಬ್ಲ್ಯೂ-2

**ದಿನಾಂಕ 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದೇನೆ. 2 ನೇ ಪಕ್ಷಗಾರ ಸಂಸ್ಥೆಯನ್ನು ದಿನಾಂಕ 17.04.2017 ರಲ್ಲಿ ಕೆಲಸಕ್ಕೆ ಸೇರಿಕೊಂಡು, ದಿನಾಂಕ 02.10.2022 ರವರೆಗೆ ಕೆಲಸ ಮಾಡಿರುತ್ತೇನೆ. ನಾನು 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಕೆಲಸ ಮಾಡುವ ಮುಂಚೆ ನಾನು ರಂಗ್ ಸನ್ಸ ಎಲೆಕ್ಟ್ರಾನಿಕ್ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕನಾಗಿ ಕೆಲಸ ಮಾಡಿರುತ್ತೇನೆ. ಸದರಿ ಸಂಸ್ಥೆ ಕಾರ್ಖಾನೆ ಕಾಯ್ದೆ ಅಡಿಯಲ್ಲಿ ನೋಂದಣಿಗೊಂಡಿತ್ತು. ಕಾರ್ಖಾನೆಗಳು ಹೇಗೆ ಕೆಲಸ ಮಾಡುತ್ತವೆ ಎಂಬ ಬಗ್ಗೆ ನನಗೆ ಪೂರ್ಣ ಅರಿವು ಇರುತ್ತದೆ ಎಂದರೆ ಸರಿ.

ನಾನು ಮೈಸೂರು ಜಿಲ್ಲಾ ಕಾರ್ಮಿಕ ಸಂಘದಲ್ಲಿ ಸದಸ್ಯನಾಗಿದ್ದೆ. ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕಾರ್ಮಿಕ ಸಂಘ ಇರಲಿಲ್ಲ ಎಂದರೆ ಸರಿ. ದಿನಾಂಕ 02.10.2022 ರ ವೇಳೆಗೆ ಕಂಪನಿ ವತಿಯಿಂದ 40 ಜನ ಕಾರ್ಮಿಕರು ಹಾಗೂ ಗುತ್ತಿಗೆ ಆಧಾರದಲ್ಲಿ 70 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ನ್ಯಾಯಾಲಯದಲ್ಲಿ ನನ್ನನ್ನು ಹೊರತು ಪಡಿಸಿ ಇನ್ನೂ 14 ಜನ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಮತ್ತು ಶ್ರೀಧರ ಎನ್ನುವವರು ಉಳಿದ 14 ಜನರ ಪರವಾಗಿ ಸಾಕ್ಷಿಯನ್ನು ಕೊಡುತ್ತಿದ್ದೇವೆ ಎಂದರೆ ಸರಿ. ನನಗೆ ಉಳಿದ 14 ಕಾರ್ಮಿಕರು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಸದರಿ ಅಧಿಕಾರ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೀರಾ ಎಂದರೆ ಎಲ್ಲರ ಸಹಿ ಮಾಡಿಸಿ ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ ಎನ್ನುತ್ತಾರೆ. ನಾನು ಸದರಿ ಅಧಿಕಾರ ಪತ್ರವನ್ನು ಈ

ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ 15 ಜನ ಕಾರ್ಮಿಕರು ಕಾರ್ಮಿಕ ಸಂಘದ ಸದಸ್ಯರು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ. ನಾವು 15 ಜನ ಕಾರ್ಮಿಕರು ಯಾವುದೇ ಸಂಘದ ಸದಸ್ಯರಾಗಿಲ್ಲದೇ ಇರುವ ಕಾರಣ ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 02.10.2022 ರಂದು ಏಕೆ ಕೆಲಸ ನಿರಾಕರಿಸಿರುತ್ತಾರೆ ಎಂದರೆ ಸಾಕ್ಷಿ, ಎರಡು ದಿನ ಕೆಲಸ ಇಲ್ಲ ಎಂದು ರಜೆ ಕೊಟ್ಟಿದ್ದರು, ನಂತರ 15 ದಿನ ಬೇರೆ ಕಡೆಗೆ ಸಂಸ್ಥೆಯನ್ನು ಸ್ಥಳಾಂತರಿಸುತ್ತೇವೆ ಎಂದು ಹೇಳಿದರು, ನಂತರ ನಮಗೆ ಕೆಲಸ ಇಲ್ಲ ಎಂದು ಹೇಳಿರುತ್ತಾರೆ. ನಂತರ 2022 ರ ಅಕ್ಟೋಬರ್ 3 ನೇವಾರದಲ್ಲಿ ನಮಗೆ ಕೆಲಸ ಇಲ್ಲ ಎಂದು ಹೇಳಿದ್ದರು.

2 ನೇ ಪಕ್ಷಗಾರರು ಮೈಸೂರಿನಲ್ಲಿ ಕೆಲಸ ಇಲ್ಲ, ಬೆಂಗಳೂರಿನಲ್ಲಿ ಬಂದು ಕೆಲಸಕ್ಕೆ ಸೇರಿಕೊಳ್ಳಿ ಎಂದು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ದಿನಾಂಕ 02.10.2022 ರ ಸಮಯದಲ್ಲಿ ತುಂಬಾ ಜೋರಾಗಿ ಮಳೆ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಮಳೆ ನೀರು ಕಾರ್ಖಾನೆ ಒಳಗೆ ಹರಿದು ಪೇಪರ್ ಗಳು, ಫೈಲ್ ಗಳು ಒದ್ದೆಯಾಗಿ, ಅಲ್ಲಿ ಕೆಲಸ ಮಾಡದೇ ಇರುವ ಪರಿಸ್ಥಿತಿ ಉಂಟಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಕೆಲವು ಭಾವಚಿತ್ರಗಳನ್ನು ತೋರಿಸಿ ಅವು ತುಂಬಾ ಮಳೆ ಬಂದು ಕಾರ್ಖಾನೆ ಒಳಗೆ ಮಳೆ ನೀರು ಹರಿದು ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಪರಿಸ್ಥಿತಿ ಉಂಟಾಗಿದ್ದ ಸ್ಥಿತಿಗೆ ಸಂಬಂಧಪಟ್ಟಿದ್ದವುಗಳು ಎಂದರೆ ಸರಿಯಲ್ಲ. 2 ನೇ ಪಕ್ಷಗಾರ ಸಂಸ್ಥೆಯವರು ಈಗಲೂ ಸಹ ಬೆಂಗಳೂರಿನಲ್ಲಿ ಬಂದು ಕೆಲಸ ಮಾಡಿ ಎಂದು ನನಗೆ ಕರೆದಿದ್ದರೂ ಸಹ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಉಳಿದ 14 ಜನರ ವಿದ್ಯಾಭ್ಯಾಸ ನನಗೆ ಗೊತ್ತಿಲ್ಲ, ಆದರೆ ಸಂಬಳ ಎಲ್ಲರಿಗೂ ಒಂದೇ ರೀತಿಯಾಗಿತ್ತು. ಅವರೆಲ್ಲ ಏಪ್ರಿಲ್-2017 ರಲ್ಲಿ 15 ದಿವಸ ಹೆಚ್ಚು ಕಡಿಮೆ ಕೆಲಸಕ್ಕೆ ಸೇರಿಕೊಂಡಿದ್ದರು. ನಿಖರವಾಗಿ ನನಗೆ ಗೊತ್ತಿಲ್ಲ. ನಮಗೆ ನಿವ್ವಳ ಸಂಬಳ ರೂ.15,000/- ಕೊಡುತ್ತಿದ್ದರು, ಇ.ಎಸ್.ಐ. ಪಿ.ಎಫ. ಮುರಿದು

ಕೊಂಡು ರೂ.10,000/- ಕೊಡುತ್ತಿದ್ದರು. ನಾನು ನ್ಯಾಯಾಲಯದ ಮುಂದೆ ನನ್ನ ವೇತನದ ಚೀಟಿಗಳನ್ನು ಹಾಜರು ಮಾಡಿರುತ್ತೇನೆ.

ನಾನು ಹಾಜರು ಮಾಡಿದ ವೇತನ ಚೀಟಿಗಳು 2018ರ ಜೂನ್, ಅಕ್ಟೋಬರ್, ಸೆಪ್ಟೆಂಬರ್, ನವೆಂಬರ ತಿಂಗಳ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ನಾನು ಯಾವ ಕಾರ್ಮಿಕರ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇನೆ ಅವರು ನ್ಯಾಯಾಲಯದ ಮುಂದೆ ಸಾಕ್ಷಿ ನೀಡಲು ನನ್ನದೇನೂ ಅಭ್ಯಂತರ ಇರುವುದಿಲ್ಲ. ನಾನು ಹಾಜರು ಮಾಡಿರುವ ಇ.ಎಸ್.ಐ. ದಾಖಲೆಗಳು ಕಾನೂನು ಬದ್ಧವಾದ ದಾಖಲೆಗಳು ಎಂದರೆ ಸರಿ. ನಾನು ಹಾಜರು ಮಾಡಿರುವ ದಾಖಲೆಗಳು ಹಾಗೂ ಅದರಲ್ಲಿ ಒದಗಿಸಿರುವ ಮಾಹಿತಿಗಳು ಕಾನೂನು ಬದ್ಧವಾಗಿದ್ದು, ಸುಳ್ಳು ಹೇಳಲು ಅವಕಾಶ ಇರುವುದಿಲ್ಲ ಎಂದರೆ ಸರಿ. ನಾನು ಹಾಜರು ಮಾಡಿರುವ ಗುರುತಿನ ಚೀಟಿಯ ದಾಖಲೆಗಳು ಮಬ್ಬಾಗಿರುತ್ತವೆ, ಅದರ ಮೂಲ ದಾಖಲೆಗಳನ್ನು ನಾನು ಮುಂದಿನ ದಿನಾಂಕದಲ್ಲಿ ಹಾಜರುಪಡಿಸಬಲ್ಲೆ. 15 ಜನರನ್ನು ಹೊರತುಪಡಿಸಿ ಉಳಿದವರು ಯಾರು ಪ್ರಕರಣ ಮಾಡಿರುವುದಿಲ್ಲ ಎಂದರೆ ಸರಿ.

ಸದರಿ 14 ಜನರ ಕಾರ್ಮಿಕರು ಹೆಸರುಗಳನ್ನು ನಾನು ಹೇಳಬಲ್ಲೆ. ಅವರ ಹೆಸರುಗಳೆಂದರೆ ನಾಗೇಂದ್ರ, ಪ್ರಸನ್ನ, ಮಂಜು ಬಿ., ಮಂಜುನಾಥ ಎಸ್., ಮತ್ತೊಬ್ಬ ಮಂಜುನಾಥ ಎಸ್., ರಾಜೇಶ, ಹರೀಷ, ನಾಗರಾಜು, ಸಿದ್ದರಾಜು, ಗೌತಮ, ಕೃಷ್ಣ, ಸಾಗರ್. ಇವರೆಲ್ಲರ ವೇತನ ಚೀಟಿಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ಇರುವವರದು ನಾವು ಕೊಟ್ಟಿರುತ್ತೇವೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

ಅಧ್ಯಕ್ಷಾಧಿಕಾರಿಗಳು,
ಕಾರ್ಮಿಕ ನ್ಯಾಯಾಲಯ, ಮೈಸೂರು